**ದಿನಾಂಕಃ 17.01.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ ಎಂ ಎಸ್ ವಕೀಲರಿಂದಃ-**

ಆರೋಪಿಯು ನಿಮ್ಮ ಬಳಿ ಯಾವ ದಿನಾಂಕದಂದು ಸಾಲ ಕೇಳಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು 2018 ರ ಅಕ್ಟೋಬರ್ ತಿಂಗಳಲ್ಲಿ ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಸಾಲ ಕೇಳಿದ ಒಂದು ವಾರದ ನಂತರ ಆರೋಪಿಗೆ ಹಣವನ್ನು ನೀಡಿರುತ್ತೇನೆ ಹಾಗೂ ಹಣ ನೀಡಿದ ದಿನಾಂಕದಂದೇ ನಿಪಿ-1 ರ ಚೆಕ್ಕನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನೀವು ನಿಮ್ಮ ದೂರಿನಲ್ಲಾಗಲೀ ಕಾನೂನು ತಿಳುವಳಿಕೆ ಪತ್ರದಲ್ಲಾಗಲೀ ಹೇಳಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ವಕೀಲರು ನೋಟಿಸನ್ನು ಜಾರಿ ಮಾಡಿದ್ದು ಅದನ್ನು ನಾನು ಅಷ್ಟಾಗಿ ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಮನೆಗೆ ಬಂದು ಹಣವನ್ನು ಕೇಳಿರುತ್ತಾರೆ, ಯಾವ ಸಮಯಕ್ಕೆ ಕೇಳಿರುತ್ತಾರೆ ಎಂದು ಈಗ ನೆನಪಿಲ್ಲ ಆದರೆ ಹಗಲು ಸಮಯದಲ್ಲಿ ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಸಾಲ ಕೇಳಲು ಆರೋಪಿ ಒಬ್ಬರೇ ಬಂದಿರುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಆದಾಯದ ಮೂಲ ಕೃಷಿ ಆಗಿರುತ್ತದೆ.

ನನಗೆ ಅಡಿಕೆ ತೋಟ ಇದ್ದು ರೂ. 15 ರಿಂದ 20 ಲಕ್ಷ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ಆರೋಪಿಗೆ ಸಾಲವಾಗಿ ನೀಡಿರುವ ಹಣವನ್ನು ನೀವು ಬ್ಯಾಂಕಿನಿಂದ ಬಿಡಿಸಿಕೊಂಡು ಬಂದು ಕೊಟ್ಟಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹಣ ಮನೆಯಲ್ಲಿ ಇತ್ತು ಅದನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿಯನ್ನು ಹೊರತುಪಡಿಸಿ ನನ್ನ ಸ್ನೇಹಿತರು ಮತ್ತು ಸಂಬಂಧಿಕರಿಗೂ ಸಾಲವನ್ನು ನೀಡಿರುತ್ತೇನೆ. ಅವರುಗಳೆಂದರೆ ಅವಿನಾಶ್, ಸುರೇಶ್, ನನ್ನ ಬಾವಮೈದ ಮತ್ತು ನನ್ನ ಹೆಂಡತಿ ತಮ್ಮ ರವರಿಗೆ ಸಾಲ ನೀಡಿರುತ್ತೇನೆ. ನಾನು ಅವರಿಗೆ ಎಷ್ಟು ಸಾಲವನ್ನು ನೀಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ, ಮುಂದಿನ ದಿನಾಂಕದಂದು ನೋಡಿ ಹೇಳುತ್ತೇನೆ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಸಾಮಾನ್ಯ ಜ್ಞಾನ ಇರುತ್ತದೆ. ಸಾಮಾನ್ಯವಾಗಿ ರೂ. 20,000 ಕ್ಕಿಂತ ಹಣವನ್ನು ಚೆಕ್ ಮೂಲಕವೇ ನೀಡಬೇಕು ಎಂಬ ಜ್ಞಾನ ನಿಮಗೆ ಇದೆಯಾ ಎಂಬ ಪ್ರಶ್ನೆಗೆ ಅದರ ಬಗ್ಗೆ ನನಗೆ ಪೂರ್ತಿ ಜ್ಞಾನ ಇಲ್ಲಾ, ಸಾಕ್ಷಿಯು ನಾನು ಅಡಿಕೆ ಮಾರಾಟ ಮಾಡಿ ಬಂದ ರೂ. 15 ರಿಂದ 20 ಲಕ್ಷ ಹಣವನ್ನು ನಗದಾಗೇ ನೀಡುತ್ತಾರೆ ಎಂದು ನುಡಿಯುತ್ತಾರೆ. ನಾನು ನನ್ನ ಸ್ನೇಹಿತರಿಗೆ ನಗದು ರೂಪದಲ್ಲೇ ಸಾಲವನ್ನು ನೀಡಿರುತ್ತೇನೆ. ಸಾಕ್ಷಿಯು ಮುಂದುವರೆದು ಕೆಲವರಿಗೆ ಚೆಕ್ ಮೂಲಕವೂ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಾಲ ನೀಡಿದ ಎಲ್ಲರ ವಿರುದ್ಧವೂ ಸಹ ದೂರು ಸಲ್ಲಿಸಿರುತ್ತಿರಾ ಎಂದರೆ ಸಾಕ್ಷಿಯು ಸಾಲ ಮರುಪಾವತಿಸದವರ ವಿರುದ್ಧ ದೂರು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿ ಮತ್ತು ಅವಿನಾಶ್ ರವರ ವಿರುದ್ಧ ದೂರನ್ನು ನೀಡಿರುತ್ತೇನೆ. ಅವಿನಾಶ್ ರವರ ವಿರುದ್ಧ ರೂ. 6.00 ಲಕ್ಷಗಳಿಗೆ ದೂರನ್ನು ಸಲ್ಲಿಸಿರುತ್ತೇನೆ.

ನಾನು ನನ್ನ ಹೆಂಡತಿಯ ಹೆಸರಲ್ಲೂ ಸಹ ಸಾಲವನ್ನು ನೀಡಿರುತ್ತೇನೆ. ನನ್ನ ಹೆಂಡತಿ ಹೆಸರಿನಲ್ಲಿ ಅವಿನಾಶ್ ರವರಿಗೆ ಸಾಲ ನೀಡಿರುತ್ತೇನೆ. ಹೆಂಡತಿಯ ಖಾತೆಯಲ್ಲಿದ್ದ ಹಣವನ್ನು ನಗದೀಕರಿಸಿ ನಾನು ಸಾಲ ನೀಡಿರುತ್ತೇನೆ. ನನ್ನ ಹೆಂಡತಿ ಹೆಸರು ಲತಾ. ಸಿಸಿ ನಂ 1274ಃ2017 ರಂತೆ ನನ್ನ ಹೆಂಡತಿಯು ರೂ. 4,25,000 ಗಳಿಗೆ ಚೆಕ್ ಪ್ರಕರಣವನ್ನು ಅವಿನಾಶ್ ರವರ ವಿರುದ್ಧ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಪ್ರಕರಣವು ಇತ್ಯರ್ಥವಾಗಿರುತ್ತದೆ ಎಂದು ನುಡಿಯುತ್ತಾರೆ. ಸಿಸಿ 1275ಃ2017 ರಂತೆ ರೂ. 6.00 ಲಕ್ಷಗಳಿಗೆ ಚೆಕ್ ಅಮಾನ್ಯ ಪ್ರಕರಣವನ್ನು ಅವಿನಾಶ್ ರವರ ವಿರುದ್ಧ ನಾನು ದಾಖಲಿಸಿರುತ್ತೇನೆ ಎಂದರೆ ಸರಿ. ಸಿಸಿ 920ಃ2017, 921ಃ2017 ರಂತೆ ಲವಕುಮಾರ್ ಮತ್ತು ಕಿರಣ್ ಕುಮಾರ್ ರವರ ವಿರುದ್ಧ ಚೆಕ್ ಅಮಾನ್ಯ ಪ್ರಕರಣವನ್ನು ನಾನು 2 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ದಾಖಲಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಅವರ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ ಹಾಗೂ ಅವರು ಯಾರು ಎಂದು ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಹೊರತುಪಡಿಸಿ ಇನ್ನೊಬ್ಬ ಸುರೇಶ್ ಕುಮಾರ್ ರವರಿಗೆ ಸಾಲವನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ.

ನಾನು ಲೇವಾದೇವಿ ಪರವಾನಗಿ ಪಡೆದಿರುವುದಿಲ್ಲ, ಸಾಕ್ಷಿ ಮುಂದುವರೆದು ನನ್ನ ಸ್ನೇಹಿತರಿಗೆ ಸಾಲ ನೀಡಿದ್ದು ನಾನು ಯಾವುದೇ ಲೇವಾದೇವಿ ವ್ಯವಹಾರ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ಚಿಕ್ಕಮಗಳೂರಿನ ಎಂ ಸಿ ಸುರೇಶ್ ರವರು ನನಗೆ ಗೊತ್ತು. ಅವರಿಗೆ ನೀವು ಎಷ್ಟು ಸಾಲವನ್ನು ನೀಡಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಅವರಿಗೂ ನನಗೂ ಮನೆ ಖರೀದಿ ವ್ಯವಹಾರ ಅಗಿತ್ತು ಕೋರ್ಟ ಡಿಕ್ರಿಯಂತೆ ನ್ಯಾಯಾಲಯದಲ್ಲಿ ಹಣವನ್ನು ಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದು ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.